| | |
|---|---|
| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**72/2021** | |
| | ಚಾಸಾ-**6** |
| | ಪ್ರಾಸಾ-**4** |
| ಸಾಕ್ಷಿದಾರರ ಹೆಸರು | ಮಲ್ಲಿಕಾರ್ಜುನ |
| ತಂದೆಯ ಹೆಸರು | ಗಿರಿಯಪ್ಪ |
| ವಯಸ್ಸು | **48** ವರ್ಷ |
| ಉದ್ಯೋಗ | ಇಂಜಿನೀಯರ್ |
| ವಾಸಸ್ಥಳ | ಅಡಿಹುಡಿ ಗ್ರಾಮ, ತಾಃ ಮಾನ್ವಿ, ಜಿಃ ರಾಯಚೂರು. |

ದಿನಾಂಕ **08.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-

ಚಾಸಾ-1 ನನ್ನ ಹೆಂಡತಿ ಇರುತ್ತಾರೆ. ನಾನು ಮತ್ತು ನನ್ನ ಹೆಂಡತಿ ಜಮಖಂಡಿಯ ಪ್ರಭಾತ ನಗರದಲ್ಲಿ ವಾಸ ಮಾಡುತ್ತೇವೆ. ದಿನಾಂಕ 21.06.2021 ರಂದು ಸಂಜೆ 5.40 ಗಂಟೆಗೆ ಚಾಸಾ-1ರವರು ನಡೆದುಕೊಂಡು ಕಾಲೇಜಿನಿಂದ ಮನೆಗೆ ಬರುತ್ತಿರುವಾಗ, ಡಾಃ ಜತ್ತಿ ರವರ ಮನೆಯ ಹತ್ತಿರ ಬರುತ್ತಿದ್ದಂತೆ ಎದುರಿನಿಂದ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದ ಮೇಲೆ ಬಂದು, ಚಾಸಾ-1 ರವರ ಕೈಯಲ್ಲಿದ್ದ ಪರ್ಸ್‌ನ್ನು ಕಿತ್ತುಕೊಂಡು ಹೋಗಿರುತ್ತಾನೆ. ಪರ್ಸನಲ್ಲಿ ವಿವೊ ಎಸ್-1 ಪ್ರೋ ಮೊಬೈಲ್, ಎಸ್ ಬಿ ಐ ಬ್ಯಾಂಕ್ ಎಟಿಎಂ ಕಾರ್ಡ, ಆಧಾರ ಕಾರ್ಡ ಮತ್ತು ರೂ.500/- ಹಣ ಇದ್ದವು. ಸದರಿ ವ್ಯಕ್ತಿ ಮೊಬೈಲನಲ್ಲಿದ್ದ ಎರಡು ಸಿಮ್‌ಗಳನ್ನು ಬಳಸಿ ಚಾಸಾ-1 ರವರ ಖಾತೆಯಿಂದ ಫೋನ್ ಪೇ ಆ್ಯಪ್ ಬಳಸಿ ದಿನಾಂಕ 21.06.2021 ರಂದು ರೂ.5,000/- ಮತ್ತು ದಿನಾಂಕ 22.06.2021 ರಂದು ರೂ.5,000/- ಹಣವನ್ನು ಬೇರೆಯವರ ಫೋನ್ ಪೇ ಖಾತೆಗೆ ವರ್ಗಾಯಿಸಿರುತ್ತಾನೆ. ಸದರಿ ಮೊಬೈಲನಿಂದ ಸದರಿ ವ್ಯಕ್ತಿಯು ಚಾಸಾ-1 ರವರು ಕೆಲಸ ಮಾಡುತ್ತಿರುವ ಕಾಲೇಜಿನಲ್ಲಿರುವ ಹುಡುಗಿಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಕಾಲ್ ಮತ್ತು ಅಶ್ಲೀಲ ಮೆಸೇಜ್‌ಗಳನ್ನು ಕಳುಹಿಸಿರುತ್ತಾನೆ. ಆದ್ದರಿಂದ ನನ್ನ ಹೆಂಡತಿ ಪೋಲಿಸರಿಗೆ ದೂರು ನೀಡಿರುತ್ತಾಳೆ. ಸದರಿ ದೂರನ್ನು ನಾನು ಬರೆದಿರುತ್ತೇನೆ. ದಿನಾಂಕ 30.06.2021 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ-1 ರವರನ್ನು ಪೋಲಿಸ್ ಠಾಣೆಗೆ ಕರೆಸಿ, ಆರೋಪಿಯನ್ನು ತೋರಿಸಿರುತ್ತಾರೆ. ಚಾಸಾ-1 ರವರು ಆರೋಪಿಯನ್ನು ಗುರುತಿಸಿರುತ್ತಾರೆ. ನಂತರ ಆರೋಪಿಯ ಹೆಸರು ಸಚಿನ್ ತಂದೆ ರವಿ ಸಿಂಗಾರೆಡ್ಡಿ ಎಂದು ತಿಳಿದು ಬಂದಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಗುರುತಿಸುತ್ತೇನೆ.

2. ಈಗ ಸಾಕ್ಷಿಗೆ ಸ.ಸ.ಅ ರವರು ನಿಪಿ-1ನ್ನು ತೋರಿಸಲಾಗಿ, ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ ಆರ್ ಡಿ ವಕೀಲರಿಂದಃ-</u>

1. ಚಾಸಾ-1 ನನ್ನ ಹೆಂಡತಿ ಇರುತ್ತಾರೆ. ಚಾಸಾ-1ರವರು ಉಪನ್ಯಾಸಕಿಯಾಗಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಕನ್ನಡ ಭಾಷೆ ತಿಳಿದಿರುತ್ತದೆ. ಚಾಸಾ-1ರವರ ಕೈಬರಹದಲ್ಲಿ ಶುದ್ಧತೆ ಇರದೇ ಇರುವುದರಿಂದ ನಾನು ದೂರನ್ನು ಬರೆದಿರುತ್ತೇನೆ. ಚಾಸಾ-1ರವರು ಹೇಳಿರುವಂತೆ ನಾನು ದೂರನ್ನು ಬರೆದಿರುತ್ತೇನೆ. ಘಟನೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ, ಚಾಸಾ-1 ರವರು ಹೇಳಿರುವಂತೆ ನಾನು ದುೂರನ್ನು ಬರೆದಿರುತ್ತೇನೆ. ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ಸಹಿತ, ಚಾಸಾ-1 ನನ್ನ ಪತ್ನಿಯಾಗಿರುವುದರಿಂದ ನಾನು ಮತ್ತು ಚಾಸಾ-1 ಕೂಡಿ ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನೆಯಾದ ನಂತರ ಚಾಸಾ-1 ರವರು ಮನೆಯವರೊಂದಿಗೆ ವಿಚಾರಿಸಿ ನಂತರ ದೂರನ್ನು ನೀಡಲು ವಿಳಂಬವಾಗಿರುತ್ತದೆ. ನಾನು ಮತ್ತು ಚಾಸಾ-1ರವರು ಒಬ್ಬರಿಗೊಬ್ಬರು ವಿಚಾರಿಸಿ ನಮಗೆ ಅನುಕೂಲವಾಗುವಂತೆ ದೂರನ್ನು ಬರೆದು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಿಳಂಬದ ಕಾರಣವನ್ನು ದೂರಿನಲ್ಲಿ ಬರೆದಿಲ್ಲ. ನಾನು ಮತ್ತು ಚಾಸಾ-1ರವರು ಪರಸ್ಪರ ಚರ್ಚಿಸಿ, ನಂತರ ನಮಗೆ ಬೇಕಾದಂತೆ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕೆ ಅನುಗುಣವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ಮೊದಲಿಗೆ ನಾನು ಪೋಲಿಸ್ ಠಾಣೆಯಲ್ಲಿ ನೋಡಿದ್ದೇನೆ. ನಂತರ ಇಂದು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಕೃತ್ಯ ಎಸಗಿರುತ್ತಾನೆ ಎಂದು ಚಾಸಾ-1 ಮತ್ತು ಪೋಲಿಸರು ನನ್ನ ಮುಂದೆ ಹೇಳಿರುತ್ತಾರೆ. ನಾನು ಚಾಸಾ-1 ಮತ್ತು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.01.09 10:26:41 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ

| | |
|---|---|
| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**72/2021** | |
| | ಚಾಸಾ-**8** |
| | ಪ್ರಾಸಾ-**5** |
| ಸಾಕ್ಷಿದಾರರ ಹೆಸರು | ಲಕ್ಷ್ಮಣ ಪೋಲೇಸಿ |
| ತಂದೆಯ ಹೆಸರು | ನಾಯಕಪ್ಪ |
| ವಯಸ್ಸು | **30** ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಹಂಚಿನಾಳ, ತಾಃ ಜಮಖಂಡಿ |

ದಿನಾಂಕ **08.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-

ನಾನು ಜಮಖಂಡಿಯ ಆರ್ ಟಿ ಓ ಆಫೀಸ್ ಪಕ್ಕದಲ್ಲಿರುವ ಹರ್ಷಿತ್ ಪೆಟ್ರೋಲ್ ಪಂಪನಲ್ಲಿ ಕೆಲಸ ಮಾಡುತ್ತೇನೆ. ಇಂದು ನ್ಯಾಯಾಲಯದ ಮುಂದಿರುವ ಆರೋಪಿಯು ದಿನಾಂಕ 21.06.2021 ರಂದು ನಾನು ಕೆಲಸ ಮಾಡುವ ಪೆಟ್ರೋಲ್ ಪಂಪಗೆ ಬಂದು ತನ್ನ ಕಪ್ಪು ಬಣ್ಣದ ಹೊಂಡಾ ಶೈನ್ ಮೋಟಾರ್ ಸೈಕಲಗೆ ಟ್ಯಾಂಕ್ ತುಂಬುವವರೆಗೆ ಪೆಟ್ರೋಲ್ ಹಾಕಲು ಹೇಳಿರುತ್ತಾನೆ. ನಾನು ಸದರಿ ಮೋಟಾರ ಸೈಕಲಗೆ ಪೆಟ್ರೋಲ್ ತುಂಬಿಸಿ ರೂ.800/- ಆಗಿರುತ್ತದೆ ಎಂದು ಹೇಳಿರುತ್ತೇನೆ. ನಮ್ಮ ಪೆಟ್ರೋಲ್ ಪಂಪನಲ್ಲಿರುವ ಸ್ಕ್ಯಾನರನ ಸರ್ವರ್ ಡೌನ್ ಇದ್ದ ಕಾರಣ, ಆರೋಪಿಗೆ ನನ್ನ ಮೊಬೈಲಗೆ ಫೋನ್ ಪೇ ಮಾಡಲು ಹೇಳಿರುತ್ತೇನೆ. ಆರೋಪಿಯು ನನ್ನ ಮೊಬೈಲಗೆ ಒಮ್ಮೆ ರೂ.4,000/- ಮತ್ತು ಇನ್ನೊಮ್ಮೆ ರೂ.1,000/- ಫೋನ್ ಪೇ ಮೂಲಕ ಹಣ ಹಾಕಿರುತ್ತಾನೆ. ನಂತರ ಆರೋಪಿಯು ಪೆಟ್ರೋಲ್‌ನ ರೂ.800/- ಹಣ ಕಟಾವು ಮಾಡಿಕೊಂಡು ಉಳಿದ ಹಣ ನಗದು ಕೊಡುವಂತೆ ನನಗೆ ಹೇಳಿದ್ದು, ನಾನು ಆತನಿಗೆ ಉಳಿದ ಹಣ ರೂ.4,200/- ನಗದು ರೂಪದಲ್ಲಿ ಕೊಟ್ಟಿರುತ್ತೇನೆ.

2. ಸುಮಾರು ನಾಲ್ಕುವರೆ ವರ್ಷಗಳ ಹಿಂದೆ ಪೋಲಿಸರು ನನ್ನನ್ನು ಪೋಲಿಸ್ ಠಾಣೆಗೆ ಕರೆಸಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನನಗೆ ತೋರಿಸಿದಾಗ, ನಾನು ನನಗೆ ಫೋನ್ ಪೇ ಮೂಲಕ ಹಣ ವರ್ಗಾಯಿಸಿರುವ ವ್ಯಕ್ತಿ ಈತನೇ ಎಂದು ಪೋಲಿಸರ ಮುಂದೆ ಹೇಳಿರುತ್ತೇನೆ. ಪೋಲಿಸರು ಆರೋಪಿಯ ಹೆಸರು ಸಚಿನ್ ಸಿಂಗರೆಡ್ಡಿ ಎಂದು ನನಗೆ ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ ಆರ್ ಡಿ ವಕೀಲರಿಂದಃ-

ನನಗೆ ಪೆಟ್ರೋಲ್ ಪಂಪನಲ್ಲಿ ಪ್ರತಿ ತಿಂಗಳು ರೂ.6,000/- ಸಂಬಳ ನೀಡುತ್ತಿದ್ದರು. ನನಗೆ ಮದುವೆಯಾಗಿರುತ್ತದೆ ಮತ್ತು ಇಬ್ಬರು ಮಕ್ಕಳು ಇರುತ್ತಾರೆ. ನೀವು, ನಿಮ್ಮಹೆಂಡತಿ ಮತ್ತು ಮಕ್ಕಳು ರೂ.6,000/- ಸಂಬಳದಲ್ಲಿ ಜೀವನ ಮಾಡುತ್ತೀರಾ? ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆಯಲ್ಲಿ ಬಹಳಷ್ಟು ಜನರು ಇರುತ್ತೇವೆ, ಎಲ್ಲರೂ ದುಡಿಯುತ್ತಾರೆ ಎಂದು ನುಡಿಯುತ್ತಾರೆ.

ಪೋಲಿಸರು ನನ್ನನ್ನು ವಿಚಾರಿಸಿದಾಗ ಆರೋಪಿಯ ಬಗ್ಗೆ ಮತ್ತು ಆತ ಹಣ ಫೋನ್ ಪೇ ಮೂಲಕ ವರ್ಗಾಯಿಸಿದ ಬಗ್ಗೆ ನಾನು ಪೋಲಿಸರಿಗೆ ತಿಳಿಸಿರುತ್ತೇನೆ. ನಾನು ಯಾವ ನಂಬರನಿಂದ ಯಾವ ನಂಬರಿನ ಮೊಬೈಲಗೆ ಫೋನ್ ಪೇ ಮೂಲಕ ಹಣ ವರ್ಗಾಯಿಸಲಾಗಿದೆ ಎಂದು ಪೋಲಿಸರ ಮುಂದೆ ಹೇಳಿಲ್ಲ. ಯಾವ ನಂಬರನಿಂದ ನನ್ನ ಮೊಬೈಲಗೆ ಆರೋಪಿ ಹಣ ಹಾಕಿದ್ದಾನೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ಘಟನೆಯಾಗಿ ಸುಮಾರು 4 ವರ್ಷ ಕಳೆದಿರುತ್ತದೆ, ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಫೋನ್ ನಂಬರನ್ನು ಪೋಲಿಸರಿಗೆ ತಿಳಿಸಿರುತ್ತೇನೆ. ನನ್ನ ಫೋನ್ ನಂ.7975168780 ಇರುತ್ತದೆ. ಇದೇ ಫೋನ್ ನಂಬರಗೆ ನನಗೆ ಹಣ ವರ್ಗಾವಣೆಯಾಗಿರುತ್ತದೆ. ಈ ನಂಬರ್ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

2. ಗ್ರಾಹಕರು ಪೆಟ್ರೋಲ್ ಹಾಕಿಸಿಕೊಂಡು ನೀಡಿದ ಹಣದ ಪೈಕಿ ನಾನು ಆರೋಪಿಗೆ ರೂ.4,200/- ಹಣ ನೀಡಿರುತ್ತೇನೆ. ಆ ದಿನ ನನ್ನ ಬಳಿ ಎಷ್ಟು ಹಣ ಇತ್ತು ಎಂದು ಪೋಲಿಸರಿಗೆ ನಾನು ಹೇಳಿಲ್ಲ. ಆ ದಿನ ನನ್ನ ಕರ್ತವ್ಯದ ವೇಳೆಯಲ್ಲಿ ಆರೋಪಿ ಪೆಟ್ರೋಲ್ ಪಂಪಗೆ ಬಂದಾಗ ರೂ.4,200/- ಹಣ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪೆಟ್ರೋಲ್ ಪಂಪಗೆ ಬಂದಾಗ ಮಾಸ್ಕ ಹಾಕಿಕೊಂಡು ಬಂದಿದ್ದ, ಏಕೆಂದರೆ ಆಗ ಕರೋನಾ ಇತ್ತು. ನಾನು ಆರೋಪಿಯ ಮುಖವನ್ನು ಮೊದಲ ಬಾರಿಗೆ ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ಪೋಲಿಸರ ಹೇಳಿಕೆ ಮೇರೆಗೆ ಸದರಿ ವ್ಯಕ್ತಿಯೇ ಆರೋಪಿ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಾನು ಕೆಲಸ ಮಾಡುತ್ತಿರುವ ಪೆಟ್ರೋಲ್ ಪಂಪಗೆ ಬಂದು ತನ್ನ ವಾಹನಕ್ಕೆ ಪೆಟ್ರೋಲ್ ಹಾಕಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ರೂ.4,000/- ಮತ್ತು ರೂ.1,000/- ಹಣ ಫೋನ್ ಪೇ ಮೂಲಕ ನನ್ನ ಮೊಬೈಲಗೆ ವರ್ಗಾಯಿಸಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.4,200/- ಹಣ ವಾಪಸ್ ನೀಡಿರುತ್ತೇನೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.01.09 10:26:56 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.